ಸಂಯುಕ್ತ ಕರ್ನಾಟಕ

# Thursday 29th November 2018
# AVS Murthy RSST Trust, got Rajyotsava Award 2018

## 63 ಸಾಧಕರಿಗೆ ರಾಜ್ಯೋತ್ಸವ ಕಿರೀಟ



- ನ್ಯಾ. ಎಚ್.ಎಲ್. ದತ್ತು, ಮಾರ್ಗರೇಟ್ ಆಳ್ವ, ಜಿ.ಎನ್. ರಂಗನಾಥ್‌ರಾವ್ ಪ್ರಮುಖರು
- ಗುರುವಾರ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರಶಸ್ತಿ ಪ್ರದಾನ
- 1500 ಅರ್ಜಿಗಳು ಬಂದಿದ್ದವು

**ಸಂ.ಕ. ಸಮಾಚಾರ ಬೆಂಗಳೂರು,**
ಸುಪ್ರೀಂ ಕೋರ್ಟಿನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಚ್.ಎಲ್. ದತ್ತು, ಕೇಂದ್ರದ ಮಾಜಿ ಸಚಿವೆ ಮಾರ್ಗರೆಟ್ ಆಳ್ವ, ಹಿರಿಯ ಪತ್ರಕರ್ತ ಜಿ.ಎನ್. ರಂಗನಾಥರಾವ್, ಸಾಹಿತಿ ಎಂ.ಎಸ್. ಪ್ರಭಾಕರ(ಕಾಮರೂಪಿ) ಹಸನ್ ನಯೀಂ ಸುರಕೋಡ್ ಸೇರಿದಂತೆ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ 63 ಗಣ್ಯರಿಗೆ 2018 ರ ರಾಜ್ಯೋತ್ಸವ ಪ್ರಶಸ್ತಿ ಲಭಿಸಿದೆ.

ಸಂಘ-ಸಂಸ್ಥೆಗೆ ನೀಡಲಾಗುವ ಈ ಪ್ರಶಸ್ತಿ ಪ್ರಸಕ್ತ ಸಾಲಿನಲ್ಲಿ ಬೆಂಗಳೂರಿನ ರಂಗದೊರೆ ಸ್ಮಾರಕ ಆಸ್ಪತ್ರೆಗೆ ಲಭಿಸಿದೆ. ಮಂಗಳವಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವೆ ಡಾ. ಜಯಮಾಲಾ ಅವರ ಅಧ್ಯಕ್ಷತೆಯಲ್ಲಿ ನಡೆದ ಆಯ್ಕೆ ಸಮಿತಿ ಸಭೆಯಲ್ಲಿ ಅಂತಿಮ ಪಟ್ಟಿ ತಯಾರಿಸಿ ಮುಖ್ಯಮಂತ್ರಿಗಳಿಗೆ ನೀಡಲಾಗಿತ್ತು. ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಮತ್ತೊಮ್ಮೆ ಸಭೆ ನಡೆದು ಪ್ರಶಸ್ತಿ ಪುರಸ್ಕೃತರ ಪಟ್ಟಿಯನ್ನು ಅಂತಿಮಗೊಳಿಸಿ ಸಾಧಕರ ಹೆಸರುಗಳನ್ನು ಬಿಡುಗಡೆ ಮಾಡಲಾಯಿತು.

ಈ ಬಾರಿ ಪ್ರಶಸ್ತಿ ಬಯಸಿ 1500 ಕ್ಕೂ ಹೆಚ್ಚು ಅರ್ಜಿಗಳು ಬಂದಿದ್ದವು. ಆಯ್ಕೆ ಸಮಿತಿ ಸದಸ್ಯರು ಎಲ್ಲ ಕ್ಷೇತ್ರಗಳ 1;2 ಅನುಪಾತದಂತೆ 60 ವರ್ಷ ತುಂಬಿದ ಸಾಧಕರ ಹೆಸರುಗಳನ್ನು ನೀಡಿದ್ದರು. ಪ್ರತಿಬಾರಿ ನವೆಂಬರ್ 1 ರಂದು ನಡೆಯುತ್ತಿದ್ದ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಈ ಬಾರಿ ಉಪಚುನಾವಣೆಯ ನೀತಿ ಸಂಹಿತೆ ಹಾಗೂ ಇನ್ನಿತರ ಕಾರಣಗಳಿಂದ ತಡವಾಗಿದೆ. ಈ ಬಾರಿ ಸಂಕೀರ್ಣ ಕ್ಷೇತ್ರದಲ್ಲಿ 9 ಗಣ್ಯರಿಗೆ ಪ್ರಶಸ್ತಿ ನೀಡಲಾಗಿದ್ದರೆ ಜಾನಪದ ಕ್ಷೇತ್ರದಲ್ಲಿ ಏಳು ಮಂದಿ ಸಾಧಕರು ಪ್ರಶಸ್ತಿ ಪಡೆದುಕೊಂಡಿದ್ದಾರೆ. ದಿ.29 ರಂದು ಸಂಜೆ 6.30 ಕ್ಕೆ ರವೀಂದ್ರ ಕಲಾಕ್ಷೇತ್ರದಲ್ಲಿ

ಸಂಯುಕ್ತ ಕರ್ನಾ

---

**ಸಂ.ಕ. ಸಮಾಚಾರ ಬೆಂಗಳೂರು**

ನ್ಯಾಯಮೂರ್ತಿ ಎಚ್.ಎಲ್. ದತ್ತು, ಮಾಜಿ ಸಚಿವೆ ಮಾರ್ಗರೇಟ್ ಆಳ್ವ, ಸಾಹಿತಿಗಳಾದ ಕಾಮರೂಪಿ, ಚಿ. ಸರ್ವಮಂಗಳ, ಹಿರಿಯ ಪತ್ರಕರ್ತ ಜಿ.ಎನ್. ರಂಗನಾಥರಾವ್, ಶಿಕ್ಷಣ ತಜ್ಞೆ ಗೀತಾ ರಾಮಾನುಜಂ, ಚಿತ್ರರಂಗದ ಜೈಜಗದೀಶ್, ಭಾರ್ಗವ ಸೇರಿದಂತೆ 63 ಮಂದಿಗೆ ರಾಜ್ಯೋತ್ಸವ ಗೌರವ.

2018ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿಗೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 63 ಮಂದಿ ಗಣ್ಯರುಗಳನ್ನು ಆಯ್ಕೆ ಮಾಡಲಾಗಿದೆ. ಸರ್ಕಾರದಿಂದ ರಚಿತವಾಗಿದ್ದ ಆಯ್ಕೆ ಸಮಿತಿ ಶಿಫಾರಸು ಮಾಡಿದ ಗಣ್ಯರನ್ನು ಪ್ರಶಸ್ತಿಗೆ ಪರಿಗಣಿಸಲಾಗಿದೆ. ಪ್ರಶಸ್ತಿಗೆ ಪರಿಗಣಿಸುವಾಗ ಜಿಲ್ಲೆ, ಕ್ಷೇತ್ರ ಹಾಗೂ ಪ್ರಾದೇಶಿಕವಾರನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ.

### ಸಾಹಿತ್ಯ
ಎಂ.ಎಸ್. ಪ್ರಭಾಕರ (ಕಾಮರೂಪಿ), ಹಸನ್ ನಯೀಂ ಸುರಕೋಡ್, ಚಿ. ಸರ್ವಮಂಗಳ, ಚಂದ್ರಶೇಖರ ತಾಳ್ಯ

### ರಂಗಭೂಮಿ
ಎಸ್.ಎನ್. ರಂಗಸ್ವಾಮಿ, ಪುಟ್ಟಸ್ವಾಮಿ, ಪಂಪಣ್ಣ ಕೋಗಳಿ

### ಸಂಗೀತ
ಅಣ್ಣು ದೇವಾಡಿಗ

### ನೃತ್ಯ
ಎಂ.ಆರ್. ಕೃಷ್ಣಮೂರ್ತಿ

### ಜಾನಪದ
ಗುರುವ ಕೊರಗ, ಗಂಗಹುಚ್ಚಮ್ಮ, ಚನ್ನಮಲ್ಲೇಗೌಡ, ಶರಣಪ್ಪ ಬೂತೇರ, ಶಂಕ್ರಮ್ಮ ಮಹಾದೇವಪ್ಪಾ, ಬಸವರಾಜ ಅಲಗೂಡ, ಚೂಡಾಮಣಿ ರಾಮಚಂದ್ರ

### ಶಿಲ್ಪಕಲೆ
ಯಮನಪ್ಪ ಚಿತ್ರಗಾರ, ಬಸಣ್ಣ ಕಾಳಪ್ಪ ಕಂಚಗಾರ

### ಚಿತ್ರಕಲೆ
ಬಸವರಾಜ ರೇವಣಸಿದ್ದಪ್ಪ ಉಪ್ಪಿನ

### ಕ್ರೀಡೆ
ಕೆನತ್ ಪೊವೆಲ್, ವಿನಯ ವಿ.ಎಸ್., ಚೇತನ್ ಆರ್

### ಯಕ್ಷಗಾನ
ಹಿರಿಯಡ್ಕ ಗೋಪಾಲ ರಾವ್, ಸೀತಾರಾಮ ಕುಮಾರ ಕಟೀಲು

### ಬಯಲಾಟ
ಯಲ್ಲವ್ವಾ ದೊಡ್ಡಪ್ಪನವರ, ಭೀಮರಾಯ ಬೋರಗಿ

### ಚಲನಚಿತ್ರ
ಭಾರ್ಗವ, ಜೈಜಗದೀಶ್, ರಾಜನ್, ದತ್ತುರಾಜ್

### ಶಿಕ್ಷಣ
ಗೀತಾ ರಾಮಾನುಜಂ, ಎ.ವಿ.ಎಸ್. ಮೂರ್ತಿ, ಡಾ. ಕೆ.ಪಿ. ಗೋಪಾಲಕೃಷ್ಣ, ಶಿವಾನಂದ ಕೌಜಲಗಿ

### ಎಂಜಿನಿಯರಿಂಗ್
ಪ್ರೊ. ಸಿ.ಇ.ಜಿ. ಜಸ್ಟೋ

### ಸಂಕೀರ್ಣ
ಆರ್.ಎಸ್. ರಾಜಾರಾಂ, ಮೇಜರ್ ಪ್ರದೀಪ್ ಆರ್ಯ, ಸಿ.ಕೆ. ಜೋರಾಪುರ, ನರಸಿಂಹಯ್ಯ, ಡಿ. ಸುರೇಂದ್ರಕುಮಾರ್, ಶಾಂತಪ್ಪನವರ್ ಪಿ.ಬಿ., ನಮಃಶಿವಾಯಂ ರೇಗುರಾಜ್, ಪಿ. ರಾಮದಾಸ್, ಎಂ.ಜೆ. ಬ್ರಹ್ಮಯ್ಯ

### ಪತ್ರಿಕೋದ್ಯಮ
ಜಿ.ಎನ್. ರಂಗನಾಥರಾವ್, ಬಸವರಾಜಸ್ವಾಮಿ, ಅಮ್ಮೆಂಬಳ ಆನಂದ

### ಸಹಕಾರ
ಸಿ. ರಾಮು

### ಸಮಾಜಸೇವೆ
ಆನಂದ ಸಿ. ಕುಂದರ್, ರಾಜಪ್ಪ ಹಡಪದ, ಕೃಷ್ಣಕುಮಾರ್ ಪೂಂಜ, ಮಾರ್ಗರೇಟ್ ಆಳ್ವ

### ಕೃಷಿ
ಮಹಾದೇವಿ ಅಣ್ಣಾರಾವ ವಣದೆ, ಮೂಕಪ್ಪ ಪೂಜಾರ್

### ಪರಿಸರ
ಕಲ್ಮನೆ ಕಾಮೇಗೌಡ

### ಸಂಘ ಸಂಸ್ಥೆ
ರಂಗದೊರೆ ಸ್ಮಾರಕ ಆಸ್ಪತ್ರೆ

### ವೈದ್ಯಕೀಯ
ಡಾ. ನಾಡಗೌಡ ಜೆ.ವಿ., ಡಾ. ಸೀತಾರಾಮ ಭಟ್, ಪಿ. ಮೋಹನ್ ರಾವ್, ಡಾ. ಎಂ.ಜಿ. ಗೋಪಾಲ್

### ನ್ಯಾಯಾಂಗ
ನ್ಯಾಯಮೂರ್ತಿ ಎಚ್.ಎಲ್. ದತ್ತು

### ಹೊರನಾಡು
ಡಾ. ಎ.ಎ. ಶೆಟ್ಟಿ

### ಸ್ವಾತಂತ್ರ್ಯ ಹೋರಾಟಗಾರರು
ಬಸವರಾಜ ಬಿಸರಹಳ್ಳಿ